**ದಿನಾಂಕಃ 16.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀ. ಎಸ್ ಆರ್ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಎಂದು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ ಮತ್ತು ವಿಷಯ ತಿಳಿದುಕೊಂಡು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ನಂಜುಂಡಯ್ಯನವರು ನನ್ನ ಸಲಹೆ ಮೇರೆಗೆ 2015 ನೇ ಇಸವಿಯಲ್ಲಿ ಈಗ ತೋರಿಸಿದ ವಿಲ್ ನ್ನು ತಯಾರಿಸಿದ್ದು, ಅದಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ಸದರಿ ಸಹಿಯನ್ನು ಸಬ್ ರಿಜಿಸ್ಟ್ರಾರ್ ಕಚೇರಿ ಮೈಸೂರು ಸೌತ್ ನಲ್ಲಿ ಮಾಡಿದ್ದೇನೆ. ನಿಪಿ. 1 ವಿಲ್ ನಲ್ಲಿರುವ ನನ್ನ ಸಹಿಯನ್ನು ನಿಪಿ. 1(ಎ) ಎಂದು ಗುರುತಿಸಲಾಯಿತು. ನಿಪಿ. 1 ವಿಲ್ ನಲ್ಲಿ ಮಾನಸ ಗಂಗೋತ್ರಿ ಲೇ ಔಟ್ ನಲ್ಲಿರುವ ಮನೆಯನ್ನು ನಂಜುಂಡ್ಯಯನವರು ಅವರ ಮಗಳಾದ ಸರೋಜರವರಿಗೆ ಮಾಡಿದ್ದಾರೆ. ಸದರಿ ವಿಲ್ ನ್ನು ಬದ್ರಿನಾಥರವರು ತಯಾರಿಸಿರುತ್ತಾರೆ. ನಿಪಿ. 1 ವಿಲ್ ಗೆ ಶಿವಣ್ಣನವರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ. ನಿಪಿ. 1 ಕ್ಕೆ ದಿ.ನಂಜುಂಡಯ್ಯ ಕೂಡ ಸಹಿ ಮಾಡಿದ್ದಾರೆ. ಅವರ ಸಹಿಯನ್ನು ನೋಡಿ ಗುರುತಿಸಿದ್ದೇನೆ. ದಿ.ನಂಜುಂಡಯ್ಯನವರ ಸಹಿಯನ್ನು ನಿಪಿ. 1(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಎದುರದಾರರು ಯಾರು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ.
ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

(ಉಷಾರಾಣಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.